# ನೋಡು ನೋಡು ನೋಡು ಕೃಷ್ಣ ಹೇಗೆ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 130.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 29.
3. **Note:** These lyrics are not available in other standard books that I referred.
4. **Note:** Lyrics given here are as per Ref. 1.  The wordings in Ref. 2 fully matches with Ref. 1.
5. **Note:** Singer has followed these lyrics.

ರಾಗ: ಮೋಹನ ತಾಳ: ಆದಿ

ನೋಡು ನೋಡು ನೋಡು ಕೃಷ್ಣ, ಹೇಗೆ ಮಾಡುತಾನೆ
ಬೇಡಿಕೊಂಡರೆ ಬಾರ ಕೃಷ್ಣ, ಓಡಿ ಹೋಗುತಾನೆ || ಪ ||

ಕಂಡ ಕಂಡವರ ಮೇಲೆ ಕಣ್ಣ ಹಾಕುತಾನೆ
ಉಂಡು ಉಂಡು ಮುಸುಕನಿಟ್ಟು ಮಲಗಿಕೊಳ್ಳುತಾನೆ
ಲಂಡತನವ ಮಾಡಿ ಮಾಡಿ ಮಣ್ಣ ಗೋರುತಾನೆ
ಭಂಡು ಮಾಡಿ ಬಾಗಿಲೊಳಗೆ ಚೀರಿಕೊಳ್ಳುತಾನೆ || ೧ ||

ಕರುಣವಿಲ್ಲದಲೆ ಬಂದು ಕಾಲಲೊದೆಯುತಾನೆ
ಶರಣು ಹೊಕ್ಕರೆಯು ತಾನು ಕೊಡಲಿ ಮಸೆಯುತಾನೆ
ಹರಿಯುವ ವಾನರರ ಕೂಡ ಹಾರಾಡುತಾನೆ
ಸಿರಿ ಕೃಷ್ಣ ಹಾಲು-ತುಪ್ಪ ಸೂರೆಮಾಡುತಾನೆ || ೨ ||

ಬಾಲೆಯರಿಗೆ ವರವನಿತ್ತು ಪುರವ ಕೆಡಿಸುತಾನೆ
ನೀಲಗುದುರೆಯನೇರಿ ಹಾರಿಸಾಡುತಾನೆ
ಬಾಲಕರ ಕೂಡಿಕೊಂಡು ಕುಣಿದಾಡುತಾನೆ
ಲೋಲ ಪುರಂದರ ವಿಠಲ ತಾನು ಕುಣಿಯುತಾನೆ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನ ಬಾಲಲೀಲೆಯ ತುಂಟಾಟಗಳನ್ನು ದಶಾವತಾರಗಳೊಂದಿಗೆ ಹೊಂದಿಸಿ ದಾಸರು ಹಾಡಿದ ಹಾಡು.

> **ಕಂಡ ...... ಕಣ್ಣ ಹಾಕುತಾನೆ** = ಮತ್ಸ್ಯಾವತಾರ
>
> **ಉಂಡು ....... ಮಲಗಿಕೊಳ್ಳುತಾನೆ** = ಕೂರ್ಮಾವತಾರ
>
> **ಲಂಡತನವ ..... ಮಣ್ಣ ಗೋರುತಾನೆ** = ವರಾಹಾವತಾರ
>
> **ಭಂಡು ...... ಚೀರಿಕೊಳ್ಳುತಾನೆ** = ನರಸಿಂಹಾವತಾರ
>
> **ಕರುಣವಿಲ್ಲದಲೆ .... ಒದೆಯುತಾನೆ** = ವಾಮನವತಾರ
>
> **ಶರಣು ..... ಮಸೆಯುತಾನೆ**= ಪರಶುರಾಮಾವತಾರ
>
> **ಹರಿಯುವ ..... ಹಾರಾಡುತಾನೆ** = ರಾಮಾವತಾರ
>
> **ಸಿರಿ ಕೃಷ್ಣ .... ಸೂರೆಮಾಡುತಾನೆ** = ಕೃಷ್ಣಾವತಾರ
>
> **ಬಾಲೆಯರಿಗೆ ..... ಕೆಡಿಸುತಾನೆ** = ಬೌದ್ಧಾವತಾರ
>
> **ನೀಲಗುದುರೆ ..... ಹಾರಿಸಾಡುತಾನೆ** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** Krishna Stuti, mahatmya jnana, dashavatara,
**Sub-Category:** Krishna, kannu, dashavatara, bagilu, karuna, koti, halu, tuppa, kudure, makkalu,
**Pravachana:** NA
**Explanation:** NA